ಮೈಸೂರ ಗೆಜೆಟ್ಟು.

ನಂ. 47 ಸರ್ಕಾರದಿಂದ ಪ್ರಯಿಷ್ಟ ಆದ್ದು. ಸನ್ 1890.

ಬೆಂಗಳೂರು, ಶನಿವಾರ, ನವೆಂಬರ್ ತಾ|| 29, ಸನ್ 1890.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥತೀ ರಿಪೋರ್ಟುಗಳು; ಪ್ರೋಸ್ಪ್ಯಾಫಿನ್ ನೋಟಿಸುಗಳು.

3ನೇ ಭಾಗ–ಶ್ರೀಮ್ಮ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇಷ್ಣಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮ್ಮ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 19ನೇ ನವೆಂಬರ್ 1890.

ನಂ. 314.—ಮೆಸ್ಸರ್ ಎ. ಜೆಲುವಯ್ಯಂಗಾರ್ರು, 1890ನೇ ಇಸವಿ ನವೆಂಬರ್ 10ನೇ ಮಕ್ಕುಮಿನ ಪೂರ್ವಾನ್ಹಾತ್ಪರ ತಿವ ಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಆಫೀಸ್ ವ ಟ್ರೆಜರೀ ಚಾರ್ಜನ್ನು ಮೆಸ್ಸರ್ ಅಬ್ದುಲ್ ರಹಿಮ್ಮಾಯವರಿಗೆ ಒಪ್ಪಿಸಿರುತ್ತಾರೆ.

ನಂ. 315.—ರೆವಿನ್ಯೂ ಸರ್ವೆಯ 2ನೇ ಗ್ರೇಡ್ ಅಸಿಸ್ಟೆಂಟ್ ಸೂಪರ್ಟೆಂಡೆಂಟ್ ಮೆಸ್ಸರ್ ಟಿ. ಅಬ್ದುಲ್‌ಕರೀಂ ಅವರು, 1890ನೇ ಇಸವಿ ನವೆಂಬರ್ ಗುರ್ರೇ ಲಾಗಾಯತು 1ನೇ ಗ್ರೇಡಿಗೆ ಬಡ್ತೀ ಮಾಡಲ್ಪಟ್ಟರುತ್ತಾರೆ.

ರೆವಿನ್ಯೂ ಸರ್ವೆ 3ನೇ ಗ್ರೇಡ್ ಅಸಿಸ್ಟೆಂಟ್ ಸೂಪರ್ಟೆಂಡೆಂಟ್ ಮೆಸ್ಸರ್ ಕೆ. ರಾಮಸ್ವಾಮಯ್ಯಂಗಾರ್ರು, 1890ನೇ ಇಸವಿ ನವೆಂಬರ್ ಗುರ್ರೇ ಲಾಗಾಯತು 2ನೇ ಗ್ರೇಡಿಗೆ ಬಡ್ತೀ ಮಾಡಲ್ಪಟ್ಟರುತ್ತಾರೆ.

792

ತಾರೀಖು 22ನೇ ನವೆಂಬರ್ 1890.

ನಂ. 318.—ಶ್ರೀಮತ್ ಮಹಾರಾಜ ರಾಜಾಸಾಹೆಬ್ ಬಹದೂರವರ ತಿದ್ದುಪಾಟುದ ಇದರಡೀಕಂಡ ಮಜಲ್‌ವಾರ್ ಪಟ್ಟಿಯು ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತೆ.

ತಾರೀಖು.	ಸ್ಥಳ.	ಫಾಸಲೆ.
		ಮಜಿಲ್‌ಗಳು.
ನವೆಂಬರ್ 1890.		
25	ಪ್ರಾತಃಕಾಲ—ಮೈಸೂರಿಂದ ಎಡತೊರೆಗೆ	22
	ಸಾಯಂಕಾಲ—ಎಡತೊರೆಯಿಂದ ಹೊಳೇನರಸೀಪುರಕ್ಕೆ	28
26	ಹೊಳೇನರಸೀಪುರ ಮೊಕ್ಕಾಂ	
27	ಹೊಳೇನರಸೀಪುರದಿಂದ ಹಾಸನಕ್ಕೆ	20½
28, 29	ಹಾಸನ ಮೊಕ್ಕಾಂ	
30	ಹಾಸನದಿಂದ ಸಕಲೇಶಪುರಕ್ಕೆ	24
ಡಿಸಂಬರ್ 1890.		
1	ಸಕಲೇಶಪುರ ಮೊಕ್ಕಾಂ	
2	ಸಕಲೇಶಪುರದಿಂದ ಮಾರನಹಳ್ಳಿಗೆ	9
3, 4	ಮಾರನಹಳ್ಳೀ ಮೊಕ್ಕಾಂ ಕೋಡೀಮನೆ ಮತ್ತು ಇತರ ಕಾಫಿ ಎಸ್ಟೇಟ್‌ಗಳ ಪರಾಂಮರಿಕೆ	
5	ಮಾರನಹಳ್ಳೀಯಿಂದ ಮುಡಿಗೆರಿ ರಸ್ತೆಯ 14ನೇ ಮೈಲಿಗೆ ..	14
6, 7	ಮೊಕ್ಕಾಂ	
8	14ನೇ ಮೈಲಿನಿಂದ ಮುಡಿಗೆರೆಗೆ	14
9	ಮುಡಿಗೆರೆ ಮೊಕ್ಕಾಂ	
10	ಮುಡಿಗೆರೆಯಿಂದ ಕೊಟಿಗೆ ಹರಕ್ಕೆ	11
11	ಕೊಟಿಗೆ ಹರ ಮೊಕ್ಕಾಂ	
12	ಕೊಟಿಗೆ ಹರದಿಂದ ಸಂಪಿಗೆ ಕಾನಕ್ಕೆ	14
13	ಸಂಪಿಗೆಕಾ ಮೊಕ್ಕಾಂ	
14	ಸಂಪಿಗೆಕಾನದಿಂದ ಮೂಕ್‌ಸಿಂಗಿ ಮತ್ತು ಬಟ್ಲೇಕಾ ಮಾರ್ಗವಾಗಿ ಸಂಕೆಗೆ ..	18
15	ಸಂಕೆ ಮೊಕ್ಕಾಂ	
16	ಸಂಕೆಯಿಂದ ಕುದರೆ ಮೂಕ್‌ಗೆ	16
17	ಕುದರೆ ಮೂಕ್‌ಯಿಂದ ಸಂಕೆಗೆ	16
18	ಸಂಕೆಯಿಂದ ಕಲಸಕ್ಕೆ	6
19	ಕಲಸಮೊಕ್ಕಾಂ	
20	ಕಲಸದಿಂದ ಬಾಳೇಹೊನ್ನೂರಿಗೆ	24
21, 22	ಬಾಳೇಹೊನ್ನೂರ್ ಮೊಕ್ಕಾಂ	
23	ಬಾಳೇಹೊನ್ನೂರಿಂದ ಆಲದೂರಿಗೆ	21
24	ಆಲದೂರ್ ಮೊಕ್ಕಾಂ	
25	ಆಲದೂರಿಂದ ಚಿಕ್ಕಮುಗಳೂರಿಗೆ	12
26, 27	ಚಿಕ್ಕಮಗಳೂರು ಮೊಕ್ಕಾಂ	
28	ಚಿಕ್ಕಮಗಳೂರಿಂದ ಬೇಲೂರಿಗೆ	14½
29	ಬೇಲೂರಿಂದ ಜಾವಗಲ್ಲಿಗೆ	18
30, 31 ಜನವರೀ 1891 1, 2,	ಜಾವಗಲ್, ಕಿಲೆಯಾಡಿ, ಹಾರನಹಳ್ಳಿ ಮೊದಲಾದ ಸ್ಥಳಗಳಲ್ಲಿ ಷಿಕಾರಿ ಕ್ಯಾಂಪ್	
3	ಗಂಡಸಿ ಮೊಕ್ಕಾಂ	
4	ಗಂಡಸಿಯಿಂದ ಅತ್ತಿಕುಪ್ಪಕ್ಕೆ	39
5	ಅತ್ತಿಕುಪ್ಪದಿಂದ ಮೇಲುಕೋಟೆಗೆ	16
6	ಸಾಯಂಕಾಲ—ಮೇಲುಕೋಟೆಯಿಂದ ಮೈಸೂರಿಗೆ	30

ತಾರೀಖು 15ನೇ ನವೆಂಬರ್ 1890.

ನಂ. 316.—ನಿಟ್ಟೂರಿನಲ್ಲಿರುವ ಮುಸಾಫರ್ ಬಂಗಲೆಯು 1891ನೇ ಇಸವಿ ಫಿಬ್ರವರಿ 15ನೇ ತಾರೀಖು ಲಾಗಾಯ್ತು 2ನೇ ಕ್ಲಾಸಿನಿಂದ 3ನೇ ಕ್ಲಾಸಿಗೆ ವರ್ಗ ಮಾಡಲ್ಪಡುವದು.

ತಾರೀಖು 24ನೇ ನವೆಂಬರ್ 1890.

ನಂ. 317.—ಪೂರ್ವದಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರಾಗಿದ್ದು ಈಗ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರಾಗಿರುವಂಥಾ ಮೆಸ್ಸರ್ ಅಬ್ದುಲ್ ರಹಿಮಾನ್ ಯವರು, 1890ನೇ ಇಸವಿ ಸೆಪ್ಟೆಂಬರ್ 4ನೇ ಮತ್ತು ಂ 218ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ 3 ತಿಂಗಳ ಪ್ರಿವಿಲೀಜ್ ರಜಾವನ್ನ ಸದರೀ ತಾರೀಖಿನಿಂದ ಉಪಯೋಗಿಸಿಕೊಂಡು 1890ನೇ ಇಸವಿ ನವೆಂಬರ್ 10ನೇ ಮತ್ತು ಮಿನ ಮಧ್ಯಾನ್ಹಾತ್ಪರ ಶಿವಮೊಗ್ಗಾ ಡಿಸ್ಟ್ರಿಕ್ಟ್ ವ ಟ್ರೆಜರೀ ಚಾರ್ಜನ್ನ ವಹಿಸಿರುತ್ತಾರಾಗಿ ಆವರು ಉಪಯೋಗಿಸಿಕೊಳ್ಳದೆ ಉಳಿದಿರುವ 23 ದಿವಸಗಳ ರಜಾ ರದ್ದು ಮಾಡಲ್ಪಟ್ಟಿರುತ್ತದೆ.

ನಂ. 319.—ಮೈಸೂರು ತಾಲ್ಲೂಕು ಅಮಲ್ದಾರ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟರಾದ ಆಹಮ್ಮದ್‌ಅಲ್ಲಿ ಯವರಿಗೆ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 206ನೇ ಸೆಕ್ಷನ್ ಪ್ರಕಾರ ವಿಚಾರಣೆ ಬಗ್ಯೆ ಕಮ್ಮಿಟ್ ಮಾಡುವ ಅಧಿಕಾರ ಕೊಡಲ್ಪಟ್ಟಿರುತ್ತೆ.

ತಾರೀಖು 15ನೇ ನವೆಂಬರ್ 1890.

ನಂ. 309.—ಸ್ಯ 1870ನೇ ಇಸವಿಯ Xನೇ ನಂಬರ್ ಲ್ಯಾಂಡ್ ಅಕ್ವೆಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನ್ನನುಸರಿಸಿ ಇದರಿಂದ ಪ್ರಕಟಿಸಲ್ಪಡುವದೇನಂದರೆ:— ಮೈಸೂರು ಟವನಿನಲ್ಲಿರುವ ಇದಕ್ಕೆ ಲಗ್ಗತ್ತು ಆಗಿರುವ ತಖ್ತೆಯಿಲ್ಲಿ ವಿವರಿಸುವಣಾದ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ ಮೈಸೂರಲ್ಲಿ ಜಂಕಾನ ಮಾಡುವವರ ಬೀದಿಯಲ್ಲಿ ಬಂದು ಕಾರಂಜೀ ಕಟ್ಟುವದಕ್ಕಾಗಿ ಬೇಕಾಗಿರುತ್ತೆ.

ಪ್ಲಾನ್ ನಂಬರ್.	ಲಾಟ್ ನಂಬರ್.	ಮಾಲೀಕನ ಹೆಸರು.	ವಿವರಣೆ.	ವಿಸ್ತೀರ್ಣ.		ಚಕ್ಕುಬಂದಿ.
				ಪೂರ್ವ, ಪಶ್ಚಿಮಕ್ಕೆ.	ಉತ್ತರ ದಕ್ಷಿಣಕ್ಕೆ.	
				ಅಡಿ.	ಅಡಿ.	
1	1	ಮಿರ್ಜಾ ಕಂಬಾರಲ್ಲಿ	ಭೂಮಿ	35	22	ಪೂರ್ವ—ಮಿರ್ಜಾಕಂಬಾರಲ್ಲಿಯಮನೆ ಪಶ್ಚಿಮ—ಸರಕಾರ್ ಭೂಮಿ ಉತ್ತರ—ಮಿರ್ಜಾ ಕಂಬಾರಲ್ಲಿಯ ಆಷೂರ್‌ಖಾನ ದಕ್ಷಿಣ—ಜಂಕಾನ ಮಾಡುವವರಬೀದಿ

ಹುಕುಂ ಬಮೋಜೀಬ್,
ಟಿ. ಆನಂದರಾವ್,
ಚೀಫ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್ ಇಲಾಖಾ.

ಇಸ್ತಿಹಾರ್‌ನಾಮೆ.

ತಾರೀಖು 21ನೇ ನವೆಂಬರ್ 1890.

ನಂ. 5276—755.—ಎಗ್ಜಿಕ್ಯೂಟಿವ್ ಇಂಜನಿಯರ್ ಮೆಸ್ಸರ್ ಇರ್ವಾಯವರು, ಮಾಹೆ ಮಜಕೂರ್ 19ನೇ ಮತ್ತು ಮಿನ ಮಧ್ಯಾನ್ಹಾತ್ಪರ ಬೆಂಗಳೂರು ಡಿವಿಜ್ ಚಾರ್ಜನ್ನು ಮೆಸ್ಸರ್ ಆರ್. ಟಿ. ಸ್ಕಾಲ್ಡ್‌ವೆಲ್ ಯವರಿಗೆ ಒಪ್ಪಿಸಿರುತ್ತಾರೆ.